ಸುಬ್ಬು ಹೊಲೆಯಾರ್
ಕಲೆ: ಜಬೀವುಲ್ಲಾ ಎಂ. ಅಸದ್

ದುಃಖ ಆರದ ನೆಲದಲ್ಲಿ...

ಮುಟ್ಟಿದೆ, ಅಂತ ಆರೋಪ ಅವನದು.
ಮುಟ್ಟಬಾರದೆ, ಮನುಷ್ಯ ಮನುಷ್ಯರನ್ನು.
ಗೊತ್ತಿಲ್ಲವೇ ಮುಟ್ಟಬಾರದೆನ್ನುವುದು–
ದರ್ಪದಲ್ಲಿ ಕೇಳಿದ.
ಮುಗುಳುನಕ್ಕು ಹೇಳಿದೆ,
ಮಾಸಿದ್ದರೆ ಮೈ ಬಣ್ಣ
ತೊಳೆದು ಕೊಡುತ್ತೇನೆಂದೆ.
ಸಿಟ್ಟಿಗೆದ್ದು ಮತ್ತೆ ಮುಟ್ಟುತ್ತೀಯ ನಾಯಿ ಎಂದ.

ತಲೆತಗ್ಗಿಸಿ ನೆಲಕ್ಕೆ ಮಂಡಿಯೂರಿದೆ.
ಮುಟ್ಟಬಾರದಿತ್ತು ನೀನು...
ನೀನು ಮುಟ್ಟಬಾರದಿತ್ತು...
ಕತ್ತರಿಸಿಕೊಂಡ, ಗಂಟಲ ಎತ್ತರಿಸಿ ಕೂಗಿದ.

ಮೌನವಾದೆ, ಅಲುಗಾಡದೇ
ನಿಂತ ಎಲೆಗಳ ಹಾಗೆ
ನೀರವ... ಮೌನವಾದೆ

ಬಿಡುವುದಿಲ್ಲ ನಿನ್ನ
ನಿನ್ನ ನೆರಳೆನಾಚೆ ಓಡಿಹೋಗುವುದಿಲ್ಲ.
ಬಿಟ್ಟ ನಿಟ್ಟುಸಿರಿನಿಂದ
ನೆಲದ ಧೂಳು ಅವನ ಮುಖಕ್ಕೆ ಹಾರಿತು.

ಉರಿದೆದ್ದ ಮತ್ತಷ್ಟು
ಸುಲಿಯುತ್ತೇನೆ ಮೈ ಚಮಡವನ್ನು
ಸಿಡಿಯಿತು ಕೃತಿಯಾಗಿ

ಸುಲಿದ ಮೊದಲ ಪದರವನ್ನು ಮೃದುವಾಗಿ
ನರಳಿದೆ, ನೆಲವೇ ಮರುಗುವಂತೆ